

ಟೀಚರ್: ಹೆಚ್ಚು ಮತ್ತು ಬರಿಸುವ ವಸ್ತು ಯಾವುದು?
ಗುಂಡ: ಪುಸ್ತಕ.
ಟೀಚರ್: ಹೇಗೆ?
ಗುಂಡ: ಅದನ್ನು ತೆರೆಯುತ್ತಲೇ ನಿದ್ದೆಯ ಮಂಪರು ಆವರಿಸಲಾರಂಭಿಸುತ್ತದೆ ಟೀಚರ್.

★★★

ಆಲಸಿ ಗುಂಡ ಸ್ನಾನ ಮಾಡುವುದಕ್ಕಾಗಿ ಬಾತ್ ರೂಮ್ ಒಳಗೆ ಹೊರಟಿದ್ದ.
ಅಷ್ಟರಲ್ಲಿ ಟಿವಿಯಲ್ಲಿ ಬಿತ್ತರವಾಗುತ್ತಿದ್ದ 'ಭಾರೀ ಥಂಡಿಯಾಗಿ ಮೂರು ಜನರ ಸಾವು' ಎಂಬ ವಾರ್ತೆಯನ್ನಾಲಿಸಿ ಮರಳಿ ತೊಟ್ಟುಕೊಂಡು ಹೊರಗೆ ಬಂದುಬಿಟ್ಟ!

★★★

ಹುಡುಗ: ನಡೆಯುತ್ತಿದ್ದಂತೆಯೇ ಹಾಗೇ ನಿಂತುಬಿಡುತ್ತೇನೆ... ಕೂತಿದ್ದಂತೆಯೇ ಹಾಗೇ ಕಳೆದು ಹೋಗುತ್ತೇನೆ...
ಏ ಹುಡುಗಿ ಪ್ರೀತಿಯೆಂದರೆ ಇದೇನಾ?
ಹುಡುಗಿ: ಅಲ್ಲ ಸೋದರಾ... ಅದು ನಿತ್ರಾಣದ ಸಂಕೇತ, ದಿನಕ್ಕೆರಡು ಬಾರಿ ಚವನಪ್ರಾಶ ತೆಗೆದುಕೊಂಡರೆ ಎಲ್ಲಾ ಸರಿ ಹೋಗುತ್ತೆ

★★★

ಸಂತಾನ ತಾಯಿಯ ಸ್ವಾಸ್ಥ್ಯ ಕೆಟ್ಟುಹೋಗಿತ್ತು. ಆಸ್ಪತ್ರೆಯಲ್ಲಿ ಡಾಕ್ಟರ್ ಹೇಳಿದರು, 'ಆಕೆಗೆ ಎರಡು ಪರೀಕ್ಷೆ ಮಾಡಬೇಕಾಗಿದೆ.'
ಸಂತಾ ಜೋರಾಗಿ ಅಳುತ್ತಾ ಹೇಳಿದ, 'ದೇವರೇ ಈಗೇನು ಮಾಡಲಿ ನಾನು, ನನ್ನಮ್ಮನಿಗೆ ಓದು ಬರಹ ಬರಲ್ವಲ್ಲಾ...!'

★★★

ಸಂಜೆ ಹೊತ್ತಿಗೆ ಶಾಲೆಯ ಹಿಂದಿನ ನಾಲೆಯಲ್ಲಿ ಪ್ರಿನ್ಸಿಪಾಲ್ ಮುಳುಗುತ್ತಿರುವುದನ್ನು ನೋಡಿದ ಗುಂಡ ಜೋರಾಗಿ ಕೂಗುತ್ತಾ ಓಡತೊಡಗಿದ...
ನಾಳೆ ರಜೆ, ನಾಳೆ ರಜೆ...!

★★★

ಎಲ್‌ಕೆಜಿಯ ಪುಟ್ಟನಿಗೆ ಪರೀಕ್ಷೆಯಲ್ಲಿ ಸೊನ್ನೆ ಅಂಕಗಳು ಬಂದವು.
ಅಮ್ಮ: (ಹುಸಿ ಕೋಪ ವ್ಯಕ್ತಪಡಿಸುತ್ತಾ) ಏನೋ ಇದು?
ಪುಟ್ಟ: ಟೀಚರ್ ಬಳಿ ಸ್ಟಾರ್ ಮುಗಿದು ಹೋಗಿತ್ತು ಮಮ್ಮಿ... ಅದಕ್ಕೆ ಅವರು ಮೂನ್ (ಚಂದ್ರ) ಕೊಟ್ಟರು!

**ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

---

ಗುಂಡ: ಹಾಲಿನವರು ಮುಷ್ಕರ ಮಾಡಿದರೆ ರಸ್ತೆಗೆ ಹಾಲು ಚೆಲ್ಲುತ್ತಾರೆ.
ಟೊಮ್ಯಾಟೊ ಬೆಳೆಗಾರರು ಮುಷ್ಕರ ಮಾಡಿದರೆ ಟೊಮ್ಯಾಟೊ ರಸ್ತೆಗೆ ಚೆಲ್ಲುತ್ತಾರೆ.
ಈರುಳ್ಳಿ ಬೆಳೆಗಾರರು ಮುಷ್ಕರ ಮಾಡಿದರೆ ಈರುಳ್ಳಿ ರಸ್ತೆಗೆ ಚೆಲ್ಲುತ್ತಾರೆ. ಯಾರಿಗೂ ಉಪಯೋಗವಿಲ್ಲ.
ಗುಂಡಮ್ಮ: ಮುಷ್ಕರ ಮಾಡಿದಾಗ ರಸ್ತೆಗೆ ಚೆಲ್ಲುವುದು ಒಳ್ಳೆಯದು. ಮುಂದಿನ ವಾರ ಜ್ಯೂಯಲರಿ ಶಾಪ್‌ನವರ ಮುಷ್ಕರ ಇದೆಯಂತೆ ನಾನು ಬೆಳಗ್ಗಿನಿಂದಲೆ ರಸ್ತೆಯಲ್ಲೇ ನಿಂತಿರುತ್ತೇನೆ.

★★★

ಟೀಚರ್: ನಿಮ್ಮ ತಂದೆಗೆ ಎಷ್ಟು ವರ್ಷ?
ಹುಡುಗ: ಅವರಿಗೆ 6 ವರ್ಷ.
ಟೀಚರ್: ಏನು? ಇದು ಹೇಗೆ?
ಹುಡುಗ: ನನಗೆ 6 ವರ್ಷ. ನಾನು ಹುಟ್ಟಿದ ನಂತರ ತಾನೆ ಅವರು ತಂದೆ ಯಾಗಿರುವುದು.



ತಿಮ್ಮಿ: ಇನ್ನು ಮೇಲೆ ಗರ್ಭಿಣಿಯರಿಗೆ ಮಗು ಹುಟ್ಟಿದ ನಂತರ ರೂ. 6000 ಭತ್ಯೆ ಕೊಡುವುದಾಗಿ ಸರ್ಕಾರ ಹೇಳಿದೆ.
ಸ್ನೇಹಿತ: ಅದಕ್ಕೆ ಹೇಳುವುದು ಕ್ಯಾಶ್ ಆನ್ ಡಿಲೆವರಿ.

★★★

ಭಿಕ್ಷುಕ: ಅಣ್ಣಾ, ಮೂರು ದಿನದಿಂದ ಊಟ ಮಾಡಿಲ್ಲ. ಒಂದು ರೂಪಾಯಿ ಕೊಡಿ.
ಗುಂಡ: ಮೂರು ದಿನದಿಂದ ಊಟ ಮಾಡಿಲ್ಲ ಅಂತೀಯಾ. ಒಂದು ರೂಪಾಯಿನಲ್ಲಿ ಏನು ಮಾಡುತ್ತೀಯ?
ಭಿಕ್ಷುಕ: ಎಷ್ಟು ಕೆ.ಜಿ. ಕಮ್ಮಿಯಾಗಿದ್ದೀನಿ ಅಂತ ತೂಕ ನೋಡಿಕೊಳ್ತೀನಿ.

★★★

ಹುಡುಗ: ಸಿಸ್ಟರ್, ಒಂದು ಬಾಟಲಿ ರಕ್ತ ಬೇಕು.
ಸಿಸ್ಟರ್: ಬ್ಲಡ್ ಗ್ರೂಪ್ ಹೇಳಿ.
ಹುಡುಗ: ಯಾವ್ದಾದ್ರೂ ಆಗುತ್ತೆ.
ಸಿಸ್ಟರ್: ಯಾವುದಕ್ಕೆ?
ಹುಡುಗ: ಅದು ನನ್ನ ಗರ್ಲ್ ಫ್ರೆಂಡ್‌ಗೆ ಲವ್ ಲೆಟರ್ ಬರೆಯಲು.

**ಸಂಗ್ರಹ: ವೀಣಾ ಶಂಕರ್ ಬೆಂಗಳೂರು**